# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ , ಮೈಸೂರು.

## SC.261/2021

**P.W.-05**
**C.W.-05**

| | | |
|---|---|---|
| ಹೆಸರು | : | Ningaraju |
| ತಂದೆಯ ಹೆಸರು | : | Sannaiah |
| ವಯಸ್ಸು | : | 43 Years |
| ಉದ್ಯೋಗ | : | Village Accountant Assistant, T.Narasipura |
| ವಾಸಸ್ಥಳ | : | T.Narasipura |

**ದಿನಾಂಕಃ 03.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

ಕಳೆದ 15 ವರ್ಷಗಳಿಂದ ಟಿ.ನರಸೀಪುರ ತಾಲ್ಲೂಕು ಕಛೇರಿಯಲ್ಲಿ ಗ್ರಾಮ ಲೆಕ್ಕಿಗರ ಸಹಾಯಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ನಿಪಿ-2 ಸ್ಥಳ ಮಹಜರಾಗಿದ್ದು, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-2(ಸಿ) ಎಂದು ಗುರುತು ಪಡಿಸಿಕೊಳ್ಳಲಾಯಿತು. ಪೊಲೀಸರು ಬನ್ನಳ್ಳಿ ಗ್ರಾಮಕ್ಕೆ ಬಂದಿದ್ದರು. ಬನ್ನಳ್ಳಿ ಗ್ರಾಮದ ಮೃತ ಲಕ್ಷ್ಮೀ ಮನೆಯ ಹತ್ತಿರಕ್ಕೆ ದಿಃ30.07.2021 ರಂದು ಬಂದಿದ್ದರು. ಆ ಸ್ಥಳದಲ್ಲಿ ಪೊಲೀಸರು ಮಹಜರ್ ಮಾಡಿದರು. ಅಲ್ಲಿ ನಾನು ಮತ್ತು ನಮ್ಮ ಗ್ರಾಮ ಲೆಕ್ಕಿಗರು ಸಹಿ ಹಾಕಿದೆವು. ಪೊಲೀಸರಿಗೆ ಸ್ಥಳವನ್ನು ಆರೋಪಿಯ ಮಗ ಮತ್ತು ಇನ್ನೊಬ್ಬ ಹುಡುಗ ತೋರಿಸಿದ್ದರು. ಆರೋಪಿಯ ಕುಟುಂಬದವರು ಅಲ್ಲಿದ್ದರು. ಮೃತ ಲಕ್ಷ್ಮಿಯ ಮಗ ಅಲ್ಲಿದ್ದರು. ಪೊಲೀಸರು ಅಲ್ಲಿ ಏನು ಮಾಡಿದರು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಲ್ಲಿ ತೆಗೆದುಕೊಂಡಿರುವುದಿಲ್ಲ. ನಡೆದ ಸ್ಥಳದಲ್ಲಿ ಫೋಟೋಗಳನ್ನು ತೆಗೆದರು. ಈಗ ತೋರಿಸುತ್ತಿರುವ ಫೋಟೋಗಳಲ್ಲಿ ನಾನು ಇದ್ದೇನೆ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ರಿಂದ 6 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)**

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ –**

2. ಈಗ ತೋರಿಸಿದ ಫೋಟೋ ನಿಪಿ–3 ರಿಂದ 6 ರಲ್ಲಿ ನಮ್ಮ ಗ್ರಾಮ ಲೆಕ್ಕಿಗರು ಇದ್ದಾರೆ. ತಲೆಗೆ ಟವೇಲ್ ಸುತ್ತಿಕೊಂಡಿರುವವರು ಪಿರ್ಯಾದುದಾರರಾದ ಸೋಮಪ್ಪ ಎನ್ನುವವರು. ಈಗ ತೋರಿಸುತ್ತಿರುವ ನಿಪಿ–3 ಫೋಟೋದಲ್ಲಿ ಸದರಿ ಸೋಮಪ್ಪರವರು ದೊಣ್ಣೆಯನ್ನು ಕೊಡುತ್ತಿದ್ದಾರೆ ಎನ್ನುವುದು ಸರಿ. ಈ ಫೋಟೋದಲ್ಲಿ ನಾನು ಇದ್ದೇನೆ. ಈಗ ತೋರಿಸುತ್ತಿರುವ ಮು.ಮಾ.1 ಮತ್ತು 2 ರ ಮೇಲೆ ಇರುವ ಚೀಟಿಯಲ್ಲಿ ನನ್ನ ಸಹಿ ಇರುತ್ತವೆ. ಆ ಸ್ಥಳದಲ್ಲಿ ನನ್ನ ಮುಂದೆ ಈಗ ನೋಡುತ್ತಿರುವ ದೊಣ್ಣೆ ಮತ್ತು ಬಳೆ ಚೂರುಗಳನ್ನು ಪೊಲೀಸರು ಆ ದಿನ ತೆಗೆದುಕೊಂಡರು ಎನ್ನುವುದು ಸರಿ. ನಂತರ ಮಹಜರ್ ಮಾಡಿ ನನ್ನ ಸಹಿ ಪಡೆದರು ಎನ್ನುವುದು ಸರಿ.

**ಪಾಟೀಸವಾಲುಃ– ಶ್ರೀ.ಕೆ.ಎಂ. ವಕೀಲರು ಆರೋಪಿಯ ಪರ ಪಾಟೀಸವಾಲು "ಇರುವುದಿಲ್ಲ" ಎನ್ನುತ್ತಾರೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.